# ಡಿಜಿಟಲ್ ಸರ್ಕಿಟ್ ವಿನ್ಯಾಸ ಕಾರ್ಯಾಗಾರ ಯಶಸ್ವಿ



**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಕಂಪ್ಯೂಟರ್ ಸೈನ್ಸ್ ವಿಭಾಗವು ಡಿಜಿಟಲ್ ಸರ್ಕಿಟ್ ವಿನ್ಯಾಸದಲ್ಲಿ ಕ್ಲಿಲಿಂಕ್ಸ್ ತಂತ್ರಾಂಶ ಬಳಕೆ ಕುರಿತಾಗಿ ಅಕ್ಟೋಬರ್ 28ರಂದು ಕಾರ್ಯಾಗಾರವನ್ನು ಆಯೋಜಿಸಿತ್ತು. ಈ ಕಾರ್ಯಾಗಾರಕ್ಕೆ ಪ್ರೊ. ಶ್ರೀಗೌರಿ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಆಧುನಿಕ ಡಿಜಿಟಲ್ ಯುಗದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಡಿಜಿಟಲ್ ಮಾಧ್ಯಮವನ್ನು ಬಳಸಲಾಗುತ್ತಿದ್ದು, ಡಿಜಿಟಲ್ ಸರ್ಕಿಟ್ ವಿನ್ಯಾಸವು ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ಕ್ಲಿಲಿಂಕ್ಸ್ ತಂತ್ರಾಂಶದ ಮೂಲಕ ಡಿಜಿಟಲ್ ಸರ್ಕಿಟನ್ನು ನಿಖರವಾಗಿ ಹಾಗೂ ಸುಲಭವಾಗಿ ರಚಿಸಬಹುದೆಂದು ತಿಳಿಸಿದರು. ಕ್ಲಿಲಿಂಕ್ಸ್ ತಂತ್ರಾಂಶದ ಮುಖಾಂತರ ಡಿಜಿಟಲ್ ಸರ್ಕಿಟ್ ವಿನ್ಯಾಸವನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತೋರಿಸಿದರು. ಡಿಜಿಟಲೀಕರಣದ ಈ ದಿನಗಳಲ್ಲಿ ಡಿಜಿಟಲ್ ಸರ್ಕಿಟ್ ವಿನ್ಯಾಸದ ಕುರಿತಾಗಿ ವಿದ್ಯಾರ್ಥಿಗಳು ಅರಿವು ಹೊಂದಲು ಈ ಕಾರ್ಯಗಾರವನ್ನು ಆಯೋಜಿಸಲಾಗಿತ್ತು . ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಈ ಕಾರ್ಯಾಗಾರವನ್ನು ಆಯೋಜಿಸಿದ್ದರು. ಕಂಪ್ಯೂಟರ್ ಸೈನ್ಸ್ ದ್ವಿತೀಯ ವರ್ಷದ 40ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಕಾರ್ಯಗಾರದಲ್ಲಿ ಭಾಗವಹಿಸಿದ್ದರು ಎಂದು ಪ್ರಾಚಾರ್ಯ ಡಾ ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.